ದಿನಾಂಕಃ 29.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಸ್.ಎ ವಕೀಲರಿಂದ:**

ನನ್ನ ಹೆಸರಿನಲ್ಲಿ ಎರಡು ಮನೆ ಇದೆ. ನನ್ನ ಅಣ್ಣನ ಹೆಸರಿನಲ್ಲಿ ಒಂದು ಮನೆ ಇರುತ್ತದೆ. ನನ್ನ ಅಣ್ಣನ ಹೆಸರು ದುಗ್ಗಯ್ಯ ಎಂದರೆ ಸರಿ. ನನ್ನ ಅಣ್ಣನ ಹೆಸರಿನಲ್ಲಿ ಪ್ರತ್ಯೇಕವಾದ ಪಡಿತರ ಚೀಟಿ ಇರುತ್ತದೆ ಅದರಲ್ಲಿ ಅವನ ಹೆಂಡತಿ ಮತ್ತು ಮಕ್ಕಳ ಮಾಹಿತಿ ಇರುತ್ತದೆ. ಸಾಕ್ಷಿಯು ಮುಂದುವರೆದು ನಾವು ಎಲ್ಲರೂ ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ನಾನು ವಾಸ ಇರುವ ಮನೆಗೆ ಕಂದಾಯ ಪಾವತಿ ಮಾಡುತ್ತಿರುತ್ತೇನೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಗುರುತಿನ ಚೀಟಿಯಲ್ಲಿ ನನ್ನ ಮನೆಯ ಸಂಖ್ಯೆಯನ್ನು ನಮೂದಿಸಿರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಮತದಾರರ ಗುರುತಿನ ಪಟ್ಟಿಯಲ್ಲಿ ನಮ್ಮೆಲ್ಲರ ಹೆಸರು ಒಂದೇ ಕಡೆ ಬರುತ್ತಿಲ್ಲ ಎಂದರೆ ಸರಿಯಲ್ಲ. ನನಗೆ, ನನ್ನ ಅಣ್ಣನ, ವಾದಿಯವರಿಗೆ ಪ್ರತ್ಯೇಕವಾದ ಪಡಿತರ ಚೀಟಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವೆಲ್ಲರು ಒಟ್ಟಿಗೆ ಇರುತ್ತೇವೆ ಎಂದರೆ ಸರಿ. ದಾವಾ ಸ್ವತ್ತನ್ನು ಹೊರತುಪಡಿಸಿ ನನಗೆ, ನನ್ನ ಅಣ್ಣನಿಗೆ ಮತ್ತು ವಾದಿಯವರಿಗೆ ಪ್ರತ್ಯೇಕವಾದ ಮನೆ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಮನೆ ಖಾತೆ ಯಾವ ಸಾಲಿನಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಯಾವುದೇ ಮನೆ ಖಾತೆ ಇರುವುದಿಲ್ಲ, ನಾವೆಲ್ಲರೂ ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಮನೆ ಖಾತೆ ನಂಬರ್ ನನಗೆ ಹೇಳಲು ಸಾಧ್ಯವಿಲ್ಲ. ನಾನು ಅಂಗಡಿಯನ್ನು ನಡೆಸುತ್ತಿರುವ ಮನೆ ಖಾತೆ ನಂಬರ್ ನನಗೆ ನೆನಪಿರುವುದಿಲ್ಲ. ನಾನು ಅಂಗಡಿ ನಡೆಸುವ ಶೆಡ್ ನ ಚೆಕ್ಕುಬಂದಿಯು ನೆನಪಾಗುತ್ತಿಲ್ಲ. ನಾನು ಅಂಗಡಿ ನಡೆಸುತ್ತಿರುವ ಜಾಗದ ಖಾತೆಯ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಅಂಗಡಿಯನ್ನು ನಡೆಸಲು ನಾನು ಪರವಾನಿಗೆಯನ್ನು ಪಡೆದಿರುತ್ತೇನೆ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪರವಾನಿಗೆಯಲ್ಲಿ ಕಟ್ಟಡದ ಅಸೆಸ್ ಮೆಂಟ್ ನಂಬರ್ ನ್ನು ನಮೂದಿಸಲಾಗಿರುತ್ತದೆ. ಸದರಿ ಸಂಖ್ಯೆ ನನಗೆ ನೆನಪಿರುವುದಿಲ್ಲ. ದಾವಾ ಸ್ವತ್ತು ನಮ್ಮೆಲ್ಲರಿಗೂ ಸೇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಒಟ್ಟು 4 ಕೊಠಡಿಗಳು ಇರುತ್ತವೆ. ನನ್ನ ತಾಯಿ ಮರಣಹೊಂದಿರುತ್ತಾರೆ. ದಾವಾ ಸ್ವತ್ತಿನಲ್ಲಿ ನಾವು ಒಟ್ಟಾಗಿಯೇ ಇರುತ್ತೇವೆ, ಅಡುಗೆ ಮತ್ತು ಪೂಜೆಯನ್ನು ನಾವು ಒಟ್ಟಿಗೆಯೇ ತಯಾರಿಸುತ್ತೇವೆ. ಅದೇ ರೀತಿ ದಾವಾ ಸ್ವತ್ತಿನಲ್ಲಿ ನಾವು ಪ್ರತ್ಯೇಕವಾಗಿ ವಾಸಿಸುತ್ತಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿರುವ ಬಗ್ಗೆ ನನ್ನ ಬಳಿ ರಶೀದಿ ಇರುತ್ತದೆ.

ನಾನು ವಾದಿಯವರಿಗೆ ಉಪ ವಿಭಾಗಾಧಿಕಾರಿಯವರ ಕಛೇರಿಯಲಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ದಾವಾ ಸ್ವತ್ತು ನನಗೆ ಸೇರಿರುವುದಿಲ್ಲ ಮತ್ತು

ಅದರಲ್ಲಿ ನಾವು ಒಟ್ಟಾಗಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಯಾವುದೇ ಅಂಗಡಿಯನ್ನು ನಡೆಸುತ್ತಿರುವುದಿಲ್ಲ ಮತ್ತು ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪಡೆದಿರುವ ಪರವಾನಿಗೆಯು ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ಸದರಿ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಗೆ ನನ್ನ ತಾಯಿಯ ಹೆಸರಲ್ಲಿ ಯಾವುದೇ ಖಾತೆ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಯ ಕಂದಾಯ ರಶೀದಿಯು ನನ್ನ ಹೆಸರಿನಲ್ಲಿರುತ್ತದೆ. ನನ್ನ ತಾಯಿ ದಾವಾ ಸ್ವತ್ತಿನಲ್ಲಿರುವ ಮನೆ ಮತ್ತು ಜಾಗವನ್ನು ಸಕ್ರಮಗೊಳಿಸುವಂತೆ ಕಲಂ 94 ಸಿ ರಡಿಯಲ್ಲಿ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಯು ನನ್ನ ತಂದೆಯ ಕಾಲದಿಂದಲೂ ಇರುತ್ತದೆ. ಸದರಿ ಮನೆಯ ಪಂಚಾಯ್ತಿ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಪರವಾನಿಗೆಯೂ ಇರುವುದಿಲ್ಲ. ನನ್ನ ತಂದೆಯು ಅಂದಾಜು 30 ರಿಂದ 40 ವರ್ಷದ ಹಿಂದೆ ಮರಣಹೊಂದಿರಬಹುದು.

ನನ್ನ ತಾಯಿ 5 ವರ್ಷಗಳ ಹಿಂದ ಮರಣಹೊಂದಿರುತ್ತಾರೆ. ನಮ್ಮ ತಂದೆ ಮರಣಹೊಂದಿದ ನಂತರ ಮನೆ ಖಾತೆಯನ್ನು ನಮ್ಮ ಹೆಸರಿಗೆ ಮಾಡುವಂತೆ ನಾನಾಗಲೀ, ನನ್ನ ಸಹೋದರನಾಗಲೀ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನ ಖಾತೆಯು ನನ್ನ ತಂದೆಯ ಹೆಸರಿನಲ್ಲೂ ಇರಲಿಲ್ಲ ಮತ್ತು ನಂತರದಲ್ಲಿ ನನ್ನ ತಾಯಿಯ ಹೆಸರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ತಂದೆ ತಾಯಿ ಇಬ್ಬರೂ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡನು ನನ್ನ ತಮ್ಮ. ನನ್ನ ತಮ್ಮನ ಮದುವೆಯಾದ 10 ವರ್ಷದ ನಂತರ ನಾನು ಮದುವೆಯಾಗಿರುತ್ತೇನೆ. ನನ್ನ ತಮ್ಮ ಮದುವೆಯಾಗುವ ಸಮಯದಲ್ಲಿ ನನ್ನ ಅಣ್ಣನಿಗೆ ಮದುವೆಯಾಗಿತ್ತು. ನನ್ನ ತಮ್ಮ ಮದುವೆಯಾಗುವ 5 ವರ್ಷಗಳ ಹಿಂದೆ ನನ್ನ ಅಣ್ಣನ ಮದುವೆಯಾಗಿರುತ್ತದೆ. ನಾನು ಎರಡು ಮದುವೆಯಾಗಿರುತ್ತೇನೆ. ನನ್ನ ಮೊದಲ ಮದುವೆಯ ಸಮಯದಲ್ಲೂ ನಾವು ಒಟ್ಟಿಗೆ ಇರುತ್ತೇವೆ. ನಾನು ನನ್ನ ತಮ್ಮನ ಮದುವೆಯ 10 ವರ್ಷದ ನಂತರ ಮದುವೆಯಾಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ ಮತ್ತು ದುಗ್ಗಯ್ಯ ದಾವಾ ಸ್ವತ್ತಿನ ಮನೆಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ತರಿ ಜಮೀನು ಇರುತ್ತದೆ ಎಂದರೆ ಸರಿ. ನಾವು ಒಂದು ಕಾಲೋನಿಯಲ್ಲಿ ವಾಸವಿರುತ್ತೇವೆ ಎಂದರೆ ಸರಿ. ಅದಕ್ಕೆ ಎ.ಕೆ. ಕಾಲೋನಿ ಎಂದು ಕರೆಯುತ್ತಾರೆ ಎಂದರೆ ಸರಿ.

ಸದರಿ ಕಾಲೋನಿಯಲ್ಲಿ ನಾನು, ನನ್ನ ತಂದೆ, ತಾಯಿ, ದುಗ್ಗಯ್ಯ, ವಾದಿಯವರ ಗಂಡ ಒಟ್ಟಿಗೆ ವಾಸವಿದ್ದೆವು ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ಮದುವೆಯಾದ ನಂತರದಲ್ಲಿ ನನ್ನ ಮತ್ತು ನನ್ನ ಅಣ್ಣನ ಹಿಂಸೆ ತಾಳಲಾರದೆ ವಾದಿಯ ಗಂಡ ಪ್ರತ್ಯೇಕವಾಗಿ 2000 ನೇ ಸಾಲಿನಲ್ಲಿ ಸ.ನಂ.26 ರ ಸರ್ಕಾರಿ ಜಮೀನಿನಲ್ಲಿ ಶೆಡ್ ನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎ.ಕೆ. ಕಾಲೋನಿ ಎಂಬ ಜಾಗವು ಯಾರಿಗೂ ಪ್ರತ್ಯೇಕವಾಗಿ ಪೋಡಾಗಿರದ ಕಾರಣ ನಾವುಗಳು ಒಟ್ಟಿಗೆ ಇರುತ್ತೇವೆ ಎಂದು

ನುಡಿಯುತ್ತಾರೆ. ವಾದಿಯ ಗಂಡ 2000 ನೇ ಸಾಲಿನಿಂದಲೂ ನಾನು ಮತ್ತು ನನ್ನ ಅಣ್ಣ ಮತ್ತು ನನ್ನ ತಂದೆ ತಾಯಿಯರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ 2012 ನೇ ಸಾಲಿನಲ್ಲಿ ಮದುವೆಯಾಗಿರುತ್ತದೆ ಎಂದರೆ ಸರಿ. ತದನಂತರದಲ್ಲಿ ನನ್ನ ತಮ್ಮನು ವಾದಿಯೊಟ್ಟಿಗೆ ತಾನು ನಿರ್ಮಿಸಿದ್ದ ಶೆಡ್ ನಲ್ಲಿ ವಾಸಿಸುತ್ತಿರುತ್ತಾನೆ ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ಮದುವೆಯ ನಂತರದಲ್ಲಿ ವಾದಿಯ ಗಂಡನು ತಾನು ಇದ್ದ ಶೆಡ್ ನ್ನು ರಿಪೇರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಸದರಿ ಶೆಡ್ ನ ಉದ್ದ ಮತ್ತು ಅಗಲವನ್ನು ಹೆಚ್ಚಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರದಲ್ಲಿ ಸದರಿ ಶೆಡ್ ನ ಸುತ್ತಾ ಬೇಲಿಯನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ತಮ್ಮ ವಾಸಿಸುತ್ತಿರುವ ಮನೆಯ ವಿಸ್ತೀರ್ಣವು 40*55 ಇರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.